STOP-O

# ರಿಪ್ಪಲ್ ಫ್ರೇಗ್ರನ್ಸಸ್‌ನ ಸ್ಟಾಪ್‌–ಒ ಬ್ರಾಂಡ್‌ನಿಂದ ಮತ್ತೊಂದು ಹೆಜ್ಜೆ

# ಅಂತರರಾಷ್ಟ್ರೀಯ ಪರಿಮಳ ದಿನಕ್ಕೆ 'ದುರ್ಗಂಧಕ್ಕೆ ವಿದಾಯ ಹೇಳಿ' ಅಭಿಯಾನ

***ಮೈಸೂರಿನ ಏಳು ವಸತಿ ಪ್ರದೇಶಗಳು, ಬೆಂಗಳೂರು ಐದು ಬಸ್‌ ನಿಲ್ದಾಣಗಳಲ್ಲಿ ಸ್ಟಾಪ್‌–ಒ ಪವರ್‌ ಸ್ಯಾಚೆಟ್‌ಗಳ ಅಳವಡಿಕೆ***

---

**ಮೈಸೂರು, ಮಾರ್ಚ್‌ 21, 2019:** ಎನ್‌ಆರ್‌ ಸಮೂಹದ ಪ್ರಾದೇಶಿಕ ವಿಭಾಗವಾಗಿರುವ ರಿಪ್ಪಲ್‌ ಫ್ರೇಗ್ರನ್ಸಸ್‌ನ ಸ್ಟಾಪ್‌–ಒ ಬ್ರಾಂಡ್‌, ಅಂತರರಾಷ್ಟ್ರೀಯ ಪರಿಮಳ ದಿನದ ಪ್ರಯುಕ್ತ ಮೈಸೂರಿನ ಏಳು ವಸತಿ ಪ್ರದೇಶಗಳು ಮತ್ತು ಬೆಂಗಳೂರು ಮಹಾನಗರ ಸಾರಿಗೆ ನಿಗಮದ (ಬಿಎಂಟಿಸಿ) ಐದು ಬಸ್‌ ನಿಲ್ದಾಣಗಳಲ್ಲಿ 'ದುರ್ಗಂಧಕ್ಕೆ ವಿದಾಯ ಹೇಳಿ' ಎನ್ನುವ ವಿನೂತನ ಉಪಕ್ರಮದ ಮೂಲಕ ಸುಹಾಸನೆ ತುಂಬಿದೆ. ಈ ಉಪಕ್ರಮದ ಸ್ವಯಂಸೇವಕರು ಎನ್‌ಆರ್‌ ಸಮೂಹದ ಪ್ರೇರೇಪಣಾ ಯೋಜನೆಯಡಿ ದತ್ತು ಪಡೆಯಲಾಗಿರುವ ಎಲ್ಲಾ ಕೊಳಚೆ ಪ್ರದೇಶಗಳ ವಾಶ್‌ರೂಮ್‌ಗಳಲ್ಲಿ ಮತ್ತು ಬಿಎಂಟಿಸಿ ಬಸ್‌–ನಿಲ್ದಾಣಗಳ ವಾಶ್‌ರೂಮ್‌ಗಳಲ್ಲಿ 10,000 ಸ್ಟಾಪ್‌–ಒ ಪವರ್‌ ಸ್ಯಾಚೆಟ್‌ಗಳನ್ನು ಅಳವಡಿಸಿದರು. ವಾಶ್‌ರೂಮ್‌ಗಳ ನೈರ್ಮಲ್ಯದ ಅಗತ್ಯದ ಬಗ್ಗೆ ಅರಿವು ಮೂಡಿಸಲು ಮತ್ತು ಸುಗಂಧವನ್ನು ಹರಡಲು ಈ ಉಪಕ್ರಮವನ್ನು ಕೈಗೊಳ್ಳಲಾಗಿದೆ.

ಒಂದು ಆದರ್ಶ ವಾಶ್‌ರೂಮ್‌ ಎಂದರೆ ಯಾವುದೇ ವಾಸನೆಯಿಲ್ಲದ ಶುದ್ಧ ಮತ್ತು ತಾಜಾ ವಾಶ್‌ರೂಮಿನ ಅನುಭವವಾಗಿದೆ ಎಂದು ಸ್ಟಾಪ್‌–ಒ ನಂಬುತ್ತದೆ. ಮೈಸೂರು ಮೂಲದ ಈ ಕಂಪನಿ, ಮೈಸೂರಿನ ಕರಕುಶಲನಗರ, ಮೆಟಗಳ್ಳಿ, ಏಕಲವ್ಯನಗರ, ಭಾರತ್‌ ನಗರ, ಕಲ್ಯಾಣಗಿರಿ–ಕೆ.ಎಸ್‌.ಬಿ ಕಾಲೊನಿ, ವಂದೇಮಾತರಂ, ಅಂಬೇಡ್ಕರ್‌ ಜ್ಞಾನ ಲೋಕ ಮತ್ತು ಕೇಸರೆ–ಕುರಿಮಂದಿ ಪ್ರದೇಶಗಳಲ್ಲಿನ ಬಡ ವಸತಿಗೃಹಗಳ ಸ್ನಾನಗೃಹಗಳಲ್ಲಿ ಸುಗಂಧವನ್ನು ಹರಡುವ ಉಪಕ್ರಮವನ್ನು ಕೈಗೆತ್ತಿಕೊಂಡಿದೆ.

ಪ್ರೇರೇಪಣಾ ಯೋಜನೆಯಡಿ ಸಂಸ್ಥೆಯು ಈಗಾಗಲೇ ಈ ಪ್ರದೇಶಗಳ ಕಲ್ಯಾಣಕ್ಕಾಗಿ ಕಳೆದ 8 ವರ್ಷಗಳಿಂದ ಕೆಲಸ ಮಾಡುತ್ತಿದೆ. ಇದೀಗ ಇಲ್ಲಿನ ಗಾಳಿಯನ್ನು ಶುಚಿಗೊಳಿಸುವ ಕಡೆಗೆ ಮತ್ತೊಂದು ಹೆಜ್ಜೆಯನ್ನಿಡುವ ಮೂಲಕ ನಿವಾಸಿಗಳ ಮುಖದಲ್ಲಿ ಸಂತಸ ಮೂಡಿಸಲು ಕಾರಣವಾಗಿದೆ. ಈ ಏಳು ಕಾರ್ಯಾಚರಣೆಗಳಲ್ಲಿ ಸುಮಾರು 2100 ಮನೆಗಳನ್ನು ತಲುಪಿ, ಅವರಿಗೆ ಸ್ನಾನಗೃಹ–ಶೌಚಾಲಯಗಳ ಶಿಷ್ಟಾಚಾರದ ಬಗ್ಗೆ ಶಿಕ್ಷಣ ನೀಡಲಾಗುತ್ತದೆ.

STOP-O

**ಈ ಅಭಿಯಾನದ ಬಗ್ಗೆ ಮಾತನಾಡಿದ ಕಲ್ಯಾಣಗಿರಿ–ಕೆ.ಎಸ್.ಬಿ ಕಾಲೊನಿಯ ಶಿಕ್ಷಣ ಸಮಿತಿ ಸದಸ್ಯರಾದ ಶ್ರೀಮತಿ ಸಮೀನಾ ಜಾಬೀನ್,** 'ನಾವು ನಮ್ಮ ಸಮುದಾಯದಲ್ಲಿ ಯಾವಾಗಲೂ ವಾಶ್‌ರೂಮಿನ ನೈರ್ಮಲ್ಯದ ಪ್ರಾಮುಖ್ಯತೆಯ ಬಗ್ಗೆ ಒತ್ತು ನೀಡುತ್ತ ಬಂದಿದ್ದೇವೆ. ಈ ಉಪಕ್ರಮವು ಈ ಸಂದೇಶವನ್ನು ಕೇವಲ ಪದಗಳಲ್ಲಿ ಅಲ್ಲ, ಕ್ರಿಯೆಯ ಮೂಲಕವೂ ಸಾರುವ ಪ್ರಯತ್ನ ಮಾಡಿದೆ. ಈ ಕಾರ್ಯಕ್ರಮದ ಭಾಗವಾಗಲು ನನಗೆ ಸಂತಸವೆನಿಸುತ್ತದೆ. ಮತ್ತು ಎಲ್ಲಾ ಕಡೆ ಸ್ಟಾಪ್–ಒ ಸ್ಯಾಚೆಟ್‌ಗಳ ಯಶಸ್ವಿ ಸ್ಥಾಪನೆಗೆ ಮಾರ್ಗದರ್ಶನ ಮಾಡಲು ಹೆಮ್ಮೆ ಎನಿಸುತ್ತದೆ' ಎಂದರು.

ಬೆಂಗಳೂರಿನ ಬಿಎಂಟಿಸಿ ಜೊತೆಗೆ ಕೈ ಜೋಡಿಸಿ, ಶಾಂತಿ ನಗರ, ಜಯನಗರ 4 ನೇ ಬ್ಲಾಕ್, ಬನಶಂಕರಿ, ಕೆಂಗೇರಿ ಮತ್ತು ವಿಜಯನಗರ ಬಸ್ ನಿಲ್ದಾಣಗಳನ್ನು ಒಳಗೊಂಡಂತೆ ರಾಜಧಾನಿಯಲ್ಲಿ ಹೆಚ್ಚು ಬಳಸಲ್ಪಡುವ ಬಸ್ ಮಾರ್ಗವನ್ನು ಗುರುತಿಸಿ, 5000 ಸ್ಟಾಪ್–ಒ ಪವರ್ ಬ್ಯಾಗ್‌ಗಳನ್ನು ಅನುಸ್ಥಾಪಿಸಿದೆ.

**ಉಪಕ್ರಮದ ಬಗ್ಗೆ ಪ್ರತಿಕ್ರಿಯಿಸಿದ ರಿಪ್ಪಲ್ ಫ್ರೇಗ್ರನ್ಸಸ್‌ನ ವ್ಯವಸ್ಥಾಪಕ ನಿರ್ದೇಶಕ (ಮಾಸ್ಟರ್ ಫ್ರೇಗ್ರನ್ಸಸ್ ಕ್ರಿಯೇಟರ್) ಶ್ರೀ ಕಿರಣ್ ರಂಗ,** 'ಯಾವುದೇ ಸ್ಥಳವಿರಲಿ, ಎಂಥದ್ದೇ ಪರಿಸ್ಥಿತಿಗಳಿರಲಿ, ಪ್ರತಿಯೊಬ್ಬರೂ ಉತ್ತಮವಾದ, ಆರೋಗ್ಯಕರವಾದ ವಾಶ್‌ರೂಮ್ ಅನುಭವವನ್ನು ಪಡೆಯಬೇಕು ಎನ್ನುವುದು ರಿಪ್ಪಲ್ ಫ್ರೇಗ್ರನ್ಸಸ್‌ನ ನಂಬಿಕೆಯಾಗಿದೆ. 'ದುರ್ಗಂಧಕ್ಕೆ ವಿದಾಯ ಹೇಳಿ' ಎಂಬ ಉಪಕ್ರಮದ ಮೂಲಕ ಮೈಸೂರಿನ ಕೊಳಚೆ ಪ್ರದೇಶಗಳ ಮತ್ತು ರಾಜಧಾನಿಯ ಸಾಮಾನ್ಯ ಪ್ರದೇಶಗಳಲ್ಲಿ ಸುಗಂಧವನ್ನು ಹರಡುವುದು ನಮ್ಮ ಗುರಿಯಾಗಿದೆ. ಅಂತರರಾಷ್ಟ್ರೀಯ ಪರಿಮಳ ದಿನದ ಈ ಸಂದರ್ಭದಲ್ಲಿ ಜನರು ವಾಸನೆ ಮುಕ್ತ ವಾಶ್‌ರೂಮ್‌ಗಳ ಪ್ರಾಮುಖ್ಯತೆ ಮತ್ತು ತಾಜಾ ವಾಸನೆಯ ಸೌಲಭ್ಯಗಳ ಪ್ರಭಾವವನ್ನು ಅರ್ಥಮಾಡಿಕೊಳ್ಳಬೇಕು ಎನ್ನುವುದು ನಮ ಆಶಯವಾಗಿದೆ' ಎಂದು ಅಭಿಪ್ರಾಯಪಟ್ಟರು.

ಸ್ಟಾಪ್–ಒ ತನ್ನ ಹೊಸ ಅಭಿಯಾನದ ಮೂಲಕ ವಾಸನೆ ಮುಕ್ತ ಸ್ನಾನಗೃಹಗಳ ಅಗತ್ಯದ ಬಗ್ಗೆ ಸಾಮೂಹಿಕ ಜಾಗೃತಿಯನ್ನು ಹರಡುವುದರೊಂದಿಗೆ, ಆದರ್ಶ ವಾಶ್‌ರೂಮ್ ಅನುಭವದ ಮಾನದಂಡಗಳನ್ನು ರೂಪಿಸಿದೆ.

ಸ್ಟಾಪ್–ಒನ ಸುಗಂಧ ಪರಿಹಾರಗಳು ಪವರ್ ಬ್ಯಾಗ್ ಸುಗಂಧ ಸ್ಯಾಚೆಟ್‌ಗಳಲ್ಲಿ ಮತ್ತು ಒನ್ ಟಚ್ ಸುಗಂಧ ದ್ರವೌಷಧಗಳಲ್ಲಿ ಲಭ್ಯವಿದೆ. ಪವರ್ ಬ್ಯಾಗ್‌ಗಳು ಮೆಲನ್, ಟ್ಯಾಂಗರಿನ್, ಲೆಮನ್ ಗ್ರಾಸ್, ಮತ್ತು ಆಪಲ್ ಸಿನ್ನಮೋನ್ ಸುಗಂಧಗಳಲ್ಲಿ ಲಭ್ಯವಿದೆ, ಮತ್ತು ಒನ್ ಟಚ್ ಸ್ಪ್ರೇಗಳು ಇಂಗ್ಲೀಷ್ ಲಾವೆಂಡರ್, ಮತ್ತು ಲೆಮನ್ ಗ್ರಾಸ್ ಸುಗಂಧಗಳಲ್ಲಿ ಲಭ್ಯವಿದೆ. https://www.cycle.inಗೆ ಲಾಗಿನ್ ಆಗಿ ಆನ್‌ಲೈನ್‌ನಲ್ಲಿಯೂ ಖರೀದಿಸಬಹುದು.

## ರಿಪ್ಪಲ್ ಫ್ರೇಗ್ರನ್ಸಸ್ ಪ್ರೈ.ಲಿ. ಕುರಿತು

ರಿಪ್ಪಲ್ ಫ್ರೇಗ್ರನ್ಸಸ್ ಪ್ರೈ. ಲಿಮಿಟೆಡ್ ಎನ್‌ಆರ್ ಸಮೂಹದ ಪ್ರಾದೇಶಿಕ ಪರಿಮಳ ವಿಭಾಗವಾಗಿದೆ. ಮೈಸೂರು ಮೂಲದ ಎನ್.ಆರ್. ಸಮೂಹವು ಸೈಕಲ್ ಪ್ಯೂರ್ ಅಗರಬತ್ತೀಸ್ ಬ್ರಾಂಡ್‌ನ ಅಡಿಯಲ್ಲಿ

ಧೂಪದ್ರವ್ಯ ಮಾರುಕಟ್ಟೆಯ ನಾಯಕನಾಗಿ ಗುರುತಿಸಿಕೊಂಡಿದೆ. ರಿಪ್ಪಲ್ ಫ್ರೇಗ್ರನ್ಸಸ್ ಭಾರತದ ಪ್ರಮುಖ ಸುಗಂಧ ಮಾರುಕರ್ಟ್ಟೆಯ ಪ್ರವರ್ತಕ ಬ್ರಾಂಡ್ ಆಗಿದ್ದು, ಐರಿಸ್ ಇದರ ಪ್ರಮುಖ ಉಪ ಬ್ರಾಂಡ್ ಆಗಿದೆ. ಈ ಬ್ರಾಂಡ್ ಮೂಲಕ ಭಾರತದ ಗೃಹ ಸುಗಂಧ ಮಾರುಕಟ್ಟೆಯನ್ನು ಪ್ರವರ್ತಿಸುತ್ತಿದೆ.

## ಎನ್.ಆರ್. ಸಮೂಹದ ಬಗ್ಗೆ

ಮೈಸೂರು ಮೂಲದ ಎನ್‌ಆರ್ ಸಮೂಹ 1948ರಲ್ಲಿ ಶ್ರೀ ಎನ್. ರಂಗರಾವ್ ಅವರಿಂದ ಸ್ಥಾಪಿಸಲ್ಪಟ್ಟಿತು. ಗೃಹ ಕೈಗಾರಿಕೆಯಾಗಿ ಸ್ಥಾಪನೆಯಾದ ಎನ್‌ಆರ್ ಸಮೂಹವು ಇಂದು ಭಾರತ ಮತ್ತು ವಿದೇಶದಲ್ಲಿ ಸ್ಥಾಪಿತ ಉಪಸ್ಥಿತಿಯನ್ನು ಹೊಂದಿರುವ ಒಂದು ಯಶಸ್ವಿಯಾದ ಸಂಘಟಿತ ಉದ್ಯಮ ಸಂಸ್ಥೆಯಾಗಿ ಹೊರಹೊಮ್ಮಿದೆ. ಸಮೂಹ ಇಂದು ವಿವಿಧ ವಹಿವಾಟು ಹೊಂದಿದೆ. ಇದರಲ್ಲಿ ರಿಪಲ್ ಫ್ರಾಗ್ರೆನ್ಸ್ ಅಡಿಯಲ್ಲಿ– ಸುಗಂಧ ದ್ರವ್ಯಗಳು (ಲಿಯಾ ಬ್ರಾಂಡ್‌ನರೂಂ ಫ್ರೆಷ್‌ನರ್ಸ್, ಕಾರ್ ಫ್ರೆಷ್‌ನರ್ಸ್) ಹಾಗೂ ಸುವಾಸನೆಯುಕ್ತ ವೆಲ್‌ನೆಸ್ ಹೋಂ ಉತ್ಪನ್ನಗಳು (IRIS), ಫ್ಲೋರಲ್ ಎಕ್ಸ್ಟ್ರಾಸ್ (NESSO) ಕೂಡ ಸೇರಿವೆ. ಎನ್‌ಆರ್ ಸಮೂಹವ ಇಂದು ಕುಟುಂಬದ ಮೂರನೇ ಪೀಳಿಗೆ ಮುನ್ನಡೆಸುತ್ತಿದೆ. ಎನ್‌ಆರ್ ಸಮೂಹದ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳಲು ಭೇಟಿಕೊಡಿ: http://www.nrgroup.co.in/.

**ಮಾಧ್ಯಮ ಸಂಪರ್ಕಕ್ಕಾಗಿ: purva@brand-comm.com or call Purva |9990186904**